ಸೆಪ್ಟೆಂಬರ್ 2023

# ಸೇವಾ ವಾಣಿ






ಸೇವಾ ಸಂಗಮ

ಆರ್ಬಿಟ್



ಪೂಜ್ಯ ರಾಬರ್ಟ್ ಮಿರಾಂಡಾ
ಗುಲ್ಬರ್ಗ ಧರ್ಮಾಧ್ಯಕ್ಷರು

ಫಾ. ವಿಕ್ಟರ್ ವಾಸ್
ನಿರ್ದೇಶಕರು

## "ಆರ್ಬಿಟ್ ಸಂಸ್ಥೆ ವತಿಯಿಂದ ಶಿಕ್ಷಕರಿಗೆ ಒಂದು ದಿನದ ಆಪ್ತ-ಸಮಾಲೋಚನೆಯ ತರಬೇತಿ"

ಆಗಸ್ಟ್ 29.2023 ರಂದು ಆರ್ಬಿಟ್ ಸಂಸ್ಥೆ ಹಾಗೂ ಅಜೀಂಮ್ ಪ್ರೇಮಜಿ ಫೌಂಡೇಶನ್ ಸಂಯುಕ್ತಾಶ್ರಯದಲ್ಲಿ ಮಾನಸಿಕ ಅಸ್ವಸ್ಥರನ್ನು ಸಮುದಾಯ ಆಧಾರಿತವಾಗಿ ಪುನರ್ವಸತಿ ಗೋಳಿಸುವಲ್ಲಿ ಶಿಕ್ಷಕರಿಗೆ ಒಂದು ದಿನದ ಆಪ್ತ-ಸಮಾಲೋಚನಾ ತರಬೇತಿ ಹಮ್ಮಿಕೋಳ್ಳಲಾಯಿತು. ಸಂಸ್ಥೆಯ ನವಜೀವನ ಕಾರ್ಯಕ್ರಮದ ವ್ಯವಸ್ಥಾಪಕರಾದ ಫಾ. ಅನೀಲ್ ಕ್ರಾಸ್ತಾ ರವರು ಪ್ರಸ್ತವಿಕವಾಗಿ ಮಾತನಾಡುತ್ತಾ, "ಗುರುವಿನ ಸ್ಥಾನ ದೇವರಿಗಿಂತ ದೊಡ್ಡದು ಒಂದು ಜೀವ ಉಳಿಸಿ ಬೇಳೆಸುವ ಶಕ್ತಿ  ಶಿಕ್ಷಕರಿಗಿದೆ, ಶಾಲೆಯಲ್ಲಿ ಶಿಕ್ಷಣಕ್ಕೆ ಪೂರಕವಾದ ವಾತಾವರಣ ನಿರ್ಮಾಣ ಮಾಡುವುದು ಮೋದಲ ಆದ್ಯತೆಯಾಗಬೇಕು. ಮಗು ಒತ್ತಡಕ್ಕೆ ಒಳಗಾಗುವದರಲ್ಲಿ ಕೌಟುಂಬಿಕ ಕಾರಣ ಪ್ರಮುಖ ಪಾತ್ರ ವಹಿಸುತ್ತದೆ. ಇಂತಹ ಮಕ್ಕಳನ್ನು ತಾವುಗುರುತಿಸಿ ಆರಂಭದಲ್ಲೆ ಆಪ್ತ-ಸಮಾಲೋಚನೆ ಮಾಡುವ ಮೂಲಕ ಪರಿಹಾರ ಕಂಡುಕೊಳ್ಳಬಹುದು ಎಂದು ನೀಡಿದರು" ಈ ತರಬೇತಿ ಕಾರ್ಯಕ್ರಮಕ್ಕೆ ಎ.ಪಿ.ಡಿ ಸಂಸ್ಥೆಯ ಕುಮಾರಿ. ಅಲ್ಫಾ (ಆಪ್ತಸಮಾಲೋಚಕರು) ರವರು ಆಗಮಿಸಿದ್ದರು. ಈ ತರಬೇತಿಯಲ್ಲಿ ಒಟ್ಟು 35 ಶಿಕ್ಷಕರು ಹಾಗೂ ಸಂಸ್ಥೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



# ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ




.ಆಗಸ್ಟ್ 09.2023 ರಂದು ಹುಮನಾಬಾದ ತಾಲೂಕಿನ ಚೀನಕೇರಾ ಗ್ರಾಮದಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆಯ ಕಾರ್ಯಕರ್ತೆಯಾದ ಶ್ರೀಮತಿ. ಕವಿತಾರವರು ಮಾತನಾಡುತ್ತಾ, ಹುಮನಾಬಾದ ತಾಲೂಕಿನಲ್ಲಿ ಸುಮಾರು 135 ವಿಕಲಚೇತನ ಮಕ್ಕಳಿದ್ದಾರೆ, 0 ರಿಂದ 8 ವರ್ಷದ ಮಕ್ಕಳಲ್ಲಿ ವಿಕಲತೆ ಹೆಚ್ಚುತ್ತಿದ; ಅದ್ದರಿಂದ ಬಿಡುಗಡೆ ಹೊಂದಬೇಕಾದರೆ ಪೋಷಕರು ಜಾಗರುಕರಾಗಬೇಕು ಮತ್ತು ಮಕ್ಕಳಿಗೆ ಚಟುವಟಿಕೆ ಮಾಡಿಸುವುದರ ಮೂಲಕ ಬದಲಾವಣೆ ತರಬಹುದು ಎಂದು ತಿಳಿಸಿದರು ಹಾಗೂ ಸರ್ಕಾರದಿಂದ ಸೀಗುವ ಸೌಲಭ್ಯಗಳಾದ ನೀರಾಮಯ ಕಾರ್ಡ್, ಯು.ಡಿ.ಐ.ಡಿ ಕಾರ್ಡ್ ಹಾಗೂ ಆಧಾರ ಕಾರ್ಡ್ ಒದಗಿಸಿಕೊಡಲಾಗುವುದು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯೋಪಧ್ಯಾಯರು, ಸಹ ಶಿಕ್ಷಕರು ಹಾಗೂ ಮಕ್ಕಳು ಸೇರಿ 60 ಜನ ಭಾಗವಹಿಸಿದರು.

## "ನಿರಾಮಯ ಆರೋಗ್ಯ ವಿಮಾ ಯೋಜನೆ"

ಹುಮನಾಬಾದ ತಾಲೂಕಿನ ಕಲ್ಲೂರ ಗ್ರಾಮದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಜಾಗೃತಿ ಕಾರ್ಯಕ್ರಮ ಆಗಸ್ಟ್ 07.2023 ರಂದು ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಸೂರ್ಯಾಕಾಂತ ರವರು ನಿರಾಮಯ ಆರೋಗ್ಯ ವಿಮಾಯೋಜನೆ ಕುರಿತು ಮಾಹಿತಿ ನೀಡಿ, ಭಾರತ ಸರ್ಕಾರದ ಅಂಗವಿಕಲರ ಸಬಲೀಕರಣ ಇಲಾಖೆ ನ್ಯಾಷನಲ್ ಟ್ರಸ್ಟ್ ವ್ಯಾಪ್ತಿಯಲ್ಲಿ ಬರುವ ಆಟಿಸಂ, ಸೆರಿಬ್ರಲ್ ಪಾಲ್ಸಿ, ಇಂಟೆಲೆಕ್ಚುವಲ್, ಮಲ್ಟಿಪಲ್ ಡಿಸೆಬಿಲಿಟಿ ಇತ್ಯಾದಿ. ಅಂಗವಿಕಲತೆಯ ಬಗ್ಗೆ ಅಧಿಕೃತ ಪತ್ರ ಇರುವವರಿಗೆ ಈ ಯೋಜನೆಯು ಅನ್ವಹಿಸುತ್ತದೆ. ಒಂದು ಲಕ್ಷದ ವರೆಗೆ ವೈದ್ಯಕಿಯ ವೆಚ್ಚಗಳನ್ನು ಮರುಪಾವತಿ ವಿಧಾನದ ಮೂಲಕ ಪಡೆಯಬಹುದು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ 15 ಜನ ಸದಸ್ಯರು ಭಾಗವಹಿಸಿದರು.




## "ಆರ್ಬಿಟ್ ಸಂಸ್ಥೆ ವತಿಯಿಂದ ಅಂಗನವಾಡಿ ಕಾರ್ಯಕರ್ತೆಯರಿಗೆ ಒಂದು ದಿನದ ತರಬೇತಿ"




ಹುಮ್ನಬಾದ್ ತಾಲೂಕಿನ ದುಬಲಗುಂಡಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಸಂಯೋಜಕಿಯಾದ ಶ್ರೀಮತಿ ಮಮತಾ ಹಾಗೂ ಅಂಗನವಾಡಿ ಮೇಲ್ವಿಚಾರಕಿಯಾದ ಶ್ರೀಮತಿ ಸೀಮಾ ಠಾಕೂರ್ ರವರ ನೇತೃತ್ವದಲ್ಲಿ ದುಬಲಗುಂಡಿ ವಲಯದಲ್ಲಿ ಬರುವ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರಿಗೆ ಒಂದು ದಿನದ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳ ಕುಂದು ಕೊರತೆಗಳ ಬಗ್ಗೆ ಹಾಗೂ ಸರಕಾರದಿಂದ ಸಿಗುವ ಸೌಲಭ್ಯಗಳ ಕುರಿತು ಮಾಹಿತಿ ನೀಡಲಾಯಿತು. ವಿಶೇಷ ವಿಕಲಚೇತನರಿಗೆ ಯಾವ ರೀತಿಯಾಗಿ ಅಸೆಸ್ಮೆಂಟ್ ಮತು ಥೇರಫಿ ನೀಡುತ್ತವೆ ಎಂಬುದರ ಕುರಿತು. ನಿರಾಮಯ ಕಾರ್ಡ್ ಸೌಲಭ್ಯಗಳ ಕುರಿತು ತಿಳಿಸಿದರು. ಈ ತರಬೇತಿಯಲ್ಲಿ 45 ಅಂಗನವಾಡಿ ಕಾರ್ಯಕರ್ತೆಯರು ಭಾಗವಹಿಸಿದರು.

# ನವಜೀವನ ಕಾರ್ಯಕ್ರಮ

## “ಆಶಾ ಕಾರ್ಯಕರ್ತೆಯರಿಗೆ ಒಂದು ದಿನದ ಆಪ್ತ–ಸಮಾಲೋಚನೆಯ ತರಬೇತಿ”

ಆಗಸ್ಟ್ 28 –2023 ರಂದು ಹುಮನಾಬಾದ ಪಟ್ಟಣದ ಹೊರ ವಲಯದಲ್ಲಿರುವ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ್ ಸಂಯುಕ್ತಾಶ್ರಯದಲ್ಲಿ ಮಾನಸಿಕ ಅಸ್ವಸ್ಥರನ್ನು ಸಮುದಾಯ ಆಧಾರಿತವಾಗಿ ಪೂನರ್ವಸತಿ ಗೋಳಿಸುದಲ್ಲಿ ಆಶಾ ಕಾರ್ಯಕರ್ತೆಯರಿಗೆ ಒಂದು ದಿನದ ಆಪ್ತ–ಸಮಾಲೋಚನಾ ತರಬೇತಿ ಹಮ್ಮಿಕೋಳ್ಳಲಾಯಿತು. ಆರ್ಬಿಟ್ ಸಂಸ್ಥೆಯ ಕಾರ್ಯಕ್ರಮಗಳ ವ್ಯವಸ್ಥಾಪಕರಾದ ಸಿಸ್ಟರ್ ವಿಲ್ಮಾ ಮ್ಯಾಥ್ಯು ಅವರು ಪ್ರಸ್ತವಿಕವಾಗಿ ಮಾತಾಡುತ್ತಾ, ಮಾನಸಿಕ ಅಸ್ವಸ್ಥರು ಸಮುದಾಯದಿಂದ ತಳ್ಳಲ್ಪಟ್ಟವರಾಗಿದ್ದಾರೆ ಅವರನ್ನು ಸಮುದಾಯದಲ್ಲಿ ಪುನರ್ ಚೇತನಗೊಳಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಎಂದು ಹೇಳಿದರು. ಸಂಪನ್ಮೂಲ ವ್ಯಕ್ತಿಯಾಗಿ ಎ.ಪಿ.ಡಿ ಸಂಸ್ಥೆಯ ಕುಮಾರಿ. ಅಲ್ಫಾ ಕ್ಲಿನಿಕಲ್ ಮನಶ್ಯಾಸ್ತ್ರಜ್ಞ



ಇವರು ಈ ತರಬೇತಿಯಲ್ಲಿ ಆಶಾ ಕಾರ್ಯಕರ್ತೆಯರು ಆಪ್ತ–ಸಮಾಲೋಚನೆಯಾ ಕೌಶಲ್ಯಗಳನ್ನು ತಿಳಿದುಕೊಂಡು ಸ್ಥಳೀಯ ಮಟ್ಟದಲ್ಲಿ ಆಪ್ತ–ಸಮಾಲೋಚನೆ ಮಾಡುವುದರ ಮೂಲಕ ಮಾನಸಿಕ ರೋಗವನ್ನು ಗುರುತಿಸಿ ಅವರಿಗೆ ಸಹಾಯ ಮಾಡಬೇಕು ಎಂದು ತಿಳಿಸಿ ಹೇಳಿದರು. ಈ ತರಬೇತಿಯಲ್ಲಿ ಮುಖ್ಯವಾಗಿ ಮಾನಸಿಕ ಅಸ್ವಸ್ರರ ಲಕ್ಷಣವಾದ ಮಂದ, ಮದ್ಯಮ ಹಾಗೂ ತೀವ್ರ ರೋಗಿಗಳ ಬಗ್ಗೆ ವಿವಿದ ರೀತಿಯ ಚಟುವಟಿಕೆಯ ಮೂಲಕ ಶಿಬಿರಾರ್ಥಿಗಳಿಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ತರಬೇತಿ ನೀಡಿದರು. ಈ ತರಬೇತಿಯಲ್ಲಿ ಒಟ್ಟು 35 ಆಶಾ ಕಾರ್ಯಕರ್ತೆಯರು ಹಾಗೂ ಸಂಸ್ಥೆಯ ಸಿಬ್ಬಂರಿವರ್ಗದವರು ಉಪಸ್ಥಿತರಿದ್ದರು.





## "ಉಚಿತ ಕಣ್ಣಿನ ತಪಾಸಣೆ ಶಬಿರ"



ಆಗಸ್ಟ್ 26.2023 ರಂದು ಚಿಟಗುಪ್ಪಾ ತಾಲೂಕಿನ ಬನ್ನಳ್ಳಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಸಾಲೆನ್ಸ್ ಆಸ್ಪತ್ರೆಯ ಡಾ. ಜೈವಂತ ಹಾಗೂ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಹನುಮಂತ ರವರ ಸಮ್ಮುಖದಲ್ಲಿ ಉಚಿತ ಕಣ್ಣಿನ ತಪಾಸಣೆ ಶಬಿರ ನಡೆಯಿತ್ತು. ಈ ಶಬಿರದಲ್ಲಿ 32 ಫಲಾನುಭವಿಗಳು ಭಾಗವಹಿಸಿದರು. ಇವರಿಗೆ ಮಾನಸಿಕ ಅಸ್ವಸ್ಥತೆಯ ಕುರಿತು ಹಾಗೂ ಅನಾರೋಗ್ಯದ ವಿವಿಧ ಲಕ್ಷಣಗಳ ಕುರಿತು ಮಾಹಿತಿ ನೀಡಲಾಯಿತು. ಪ್ರಾಥಮಿಕ ಹಂತದಲ್ಲಿ ಚಿಕಿತ್ಸೆ ಪಡೆಯಲು ಚಿಟಗುಪ್ಪಾ ಸರಕಾರಿ ಆಸ್ಪತ್ರೆಯಲ್ಲಿ ತಿಂಗಳ ಮೊದಲನೆ ಶುಕ್ರವಾರದಂದು ನುರಿತ ಮನೋವೈದ್ಯರಿಂದ ಉತ್ತಮ ಹಾಗೂ ಉಚಿತ ಚಿಕಿತ್ಸೆ ಲಭ್ಯವಿದೆ ಎಂದು ತಿಳಿಸಿದರು.

## "ಮಾನಸಿಕ ಅಸ್ವಸ್ಥತೆಯ ಕುರಿತು ಜಾಗೃತಿ ಕಾರ್ಯಕ್ರಮ"

ಆಗಸ್ಟ್ 17.2023 ರಂದು ಹುಮ್ನಬಾದ್ ತಾಲೂಕಿನ ಮಲ್ಕಾಪುರ ವಾಡಿ ಗ್ರಾಮದಲ್ಲಿ ವಾಲ್ಮೀಕಿ ಮಂದಿರ ಅವರಣದಲ್ಲಿ ಮಾನಸಿಕ ಅಸ್ವಸ್ಥತೆಯ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ 17 ಗ್ರಾಮಸ್ಥರು ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ರವಿ ಕೋಡ್ಡಿಕರ ನವಜೀವನ ಕಾರ್ಯಕ್ರಮದ ಆಪ್ತ–ಸಮಲೋಚಕರು ಮಾತನಾಡುತ, ಮಾನಸಿಕ ಅಸ್ವಸ್ಥರು ಹಾಗೂ ಬುದ್ದಿಮಾಂದ್ಯರ ನಡುವಿನ ವ್ಯತ್ಯಾಸಗಳನ್ನು ತಿಳಿಸಿ ಅವರನ್ನು ಡಿ.ಎಮ್.ಎಚ್.ಪಿ ಕ್ಯಾಂಪ್ ಕರೆ ತರಲು ಸೂಚಿಸಿದರು. ನವಜೀವನ ಕಾರ್ಯಕರ್ತೆ ಶ್ರೀಮತಿ ಪ್ರೀತಿ ರವರು ಧನ್ಯವಾದಗಳೊಂದಿಗೆ ಕಾರ್ಯಕ್ರಮವನ್ನು ಮುಕ್ತಾಯಗೊಳ್ಳಿಸಿದರು.



## "ಮಾನಸಿಕ ಅಸ್ವಸ್ಥರ ಆಪ್ತ–ಸಮಾಲೋಚನೆ ತರಬೇತಿ"



ಆಗಸ್ಟ್ 23.2023 ರಂದು ಹುಮನಾಬಾದ ತಾಲೂಕಿನ ಹಳ್ಳಿಖೇಡ್ (ಕೆ) ಗ್ರಾಮದ PHC ಯಲ್ಲಿ ವಲಯ ಮಟ್ಟದ ಆಶಾ ಕಾರ್ಯಕರ್ತೆಯರಿಗೆ ಮಾನಸಿಕ ಅಸ್ವಸ್ಥರ ಆಪ್ತ–ಸಮಾಲೋಚನೆ ತರಬೇತಿ ಹಮ್ಮಿಕೊಳ್ಳಲಾಯಿತು. ಈ ತರಬೇತಿಯಲ್ಲಿ ಡಾ. ಚೈತ್ರಾನಂದ, LHO ಶ್ರೀಮತಿ ಶಕುಂತಲಾ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀಮತಿ ಮಹಾದೇವಿ, ಶ್ರೀ ಅರುಣಕುಮಾರ ಉಪಸ್ಥಿತರಿದ್ದರು. ನವಜೀವನ ಕಾರ್ಯಕ್ರಮದ ಸಂಯೋಜಕರಾರ ಶ್ರೀ ಪ್ರವಿಣಕುಮಾರ ಅವರು ಮಾತನಾಡುತ ಮಾನಸಿಕ ಅಸ್ವಸ್ಥತೆ ಎಂದರೇನು? ಅದರ ಗುಣಲಕ್ಷಣಗಳು, ಮಾನಸಿಕ ಕಾಯಿಲೆ ಹೇಗೆ ತಡೆಗಟ್ಟಬಹುದು ಎಂದು ತಿಳಿಸಿದರು. ಈ ಕಾಯಿಲೆ ಕಂಡುಬಂದರೆ ಸರಕಾರಿ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ಮತ್ತು ಮಾತ್ರೆಗಳು ಪಡೆಯಬಹುದು ಎಂದು ತಿಳಿಸಿದರು. ಈ ತರಬೇತಿಯಲ್ಲಿ 30 ಜನ ಆಶಾ ಕಾರ್ಯಕರ್ತೆಯರು ಭಾಗವಹಿಸಿದರು.

ಆಗಸ್ಟ್ 23.2023 ರಂದು ಹುಮನಾಬಾದ ತಾಲೂಕಿನ ಕುಮಾರ ಚಿಂಚೋಳಿ ಗ್ರಾಮದ ಒಂದೇ ಮನೆಯಲ್ಲಿ ತಾಯಿ ಮತ್ತು ಇಬ್ಬರು ಮಕ್ಕಳು ಸುಮಾರು 12 ವರ್ಷಗಳಿಂದ ಮಾನಸಿಕ ಕಾಯಿಲೆಗೆ ತುತ್ತಾಗಿದ್ದರು. ಕಳೆದ 7 ತಿಂಗಳ ಹಿಂದೆ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆ ಶ್ರೀಮತಿ ಪೂಜಾ ಅವರು ಮಾನಸಿಕ ಕಾಯಿಲೆಗೆ ಒಳಗದವರ ಮನೆ ಭೇಟಿ ಮಾಡಿ ಸಂಪೂರ್ಣವಾಗಿ ಮಾಹಿತಿಯನ್ನು ತಳಿದುಕೊಂಡು ಅವರನ್ನು DMHP ಕ್ಯಾಂಪ್ ಕರೆದುಕೊಂಡು ಬಂದು ಚಿಕಿತ್ಸೆ ಕೋಡಿಸಿದರು.



# ಮಕ್ಕಳ ಸಹಾಯವಾಣಿ (1098) ಕಾರ್ಯಕ್ರಮ

## "ಬಡ ಮಕ್ಕಳಿಗೆ ಉಚಿತ ಶಿಕ್ಷಣ ಮತ್ತು ವಸತಿ ಸೌಲಭ್ಯ"




ಮಕ್ಕಳ ಸಹಾಯವಾಣಿ ಕರೆಯ ಮೇರೆಗೆ ಆಗಸ್ಟ್ 29.2023 ರಂದು ಮಗುವಿನ ಮನೆಗೆ ಭೇಟಿ ನೀಡಿದಾಗ ಎರಡು ಮಕ್ಕಳಿಗೆ ವಸತಿ ಸೌಲಭ್ಯ ವ್ಯವಸ್ಥೆಗಾಗು ಮಾಹಿತಿ ಕೇಳಿದರು. ಕುಟುಂಬದ ಪರಿಸ್ಥಿತಿಯು ತುಂಬಾ ಗಂಭಿರವಾಗಿರುವುದು ಕಂಡು ಬಂದಿದ್ದು. ಮಕ್ಕಳ ತಂದೆಯು ಪಾಶ್ವಾರ್ಯ ರೋಗದಿಂದ ಬಳಲುತದ್ದರು. ಈ ಮಕ್ಕಳಿಗೆ ಪಾಲನೆ ಮಾಡಲು ತುಂಬ ಕಷ್ಟವಾಗುತಿದೆ ಎರಡು ಮಕ್ಕಳಿಗೆ ಹಾಸ್ಟೆಲ್ ವ್ಯವಸ್ಥೆ ಮಾಡಿಕೊಡಿ ಎಂದು ಮಕ್ಕಳ ತಾಯಿಯು ದು:ಖ ವ್ಯಕ್ತಪಡಿಸಿದರು. ಮಕ್ಕಳನ್ನು ಸಿ.ಡ್ಬ್ಲೂ.ಸಿ ಸಮಿತಿಗೆ ಹಾಜರು ಪಡಿಸಿ, ಮಕ್ಕಳ ಸಹಾಯವಾಣಿ ಉಪಕೇಂದ್ರ ಆರ್ಬಿಟ್ ಸಂಸ್ಥೆಯ ನಿರ್ದೇಶಕರ ಪತ್ರದ ಮುಲಕ ಮಕ್ಕಳಿಗೆ ಉಚಿತವಾಗಿ ವಿಕ್ಟೋರಿ ಚೈಲ್ಡ್ ರನ್ಸ ಹೋಮ್ ರೆಷ ಆಫ ಪಿಸ್ ಟ್ರಸ್ಟ್ ಈ ಮಕ್ಕಳಿಗೆ ಕಳುಹಿಸಿ ಕುಡಲಾಯಿತು.

## "ಉಚಿತ ಆರೋಗ್ಯ ತಪಾಸಣೆ ಶಿಬಿರ"

ಆಗಸ್ಟ್ 28.2023 ರಂದು ಚಿಟಗುಪ್ಪಾ ತಾಲೂಕಿನ ಮನ್ನಾಏಖೇಳ್ಳಿ ಗ್ರಾಮ ಪಂಚಾಯತಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಎಸ್.ಎಚ್.ಜಿ ಸಮುದಾಯ ಆರೋಗ್ಯ ಕೇಂದ್ರ ಮನ್ನಏಖ್ಖೇಳಿ ಇವರ ಸಂಯುಕತಾಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣೆ ಶಬಿರ ಹಮ್ಮಿಕೊಳ್ಳಲಾಯಿತು. ಈ ಶಬಿರದಲ್ಲಿ 80 ಫಲಾನುಭವಿಗಳು ತಪಾಸಣೆ ಮಾಡಿಸಿಕೊಂಡ ಪರಿಣಾಮವಾಗಿ 6 ಜನರಿಗೆ ಕಣ್ಣಿನ ಪೋರೆಯ ಸಮಸ್ಸೆ, 4 ಜನರಿಗೆ ಕಣ್ಣಿನಲ್ಲಿ ಮಾಂಸ ಬೆಳೆದಿರುವುದು ಮತ್ತು 9 ಜನರಿಗೆ ಕಣ್ಣಿನ ದೃಷ್ಟಿದೋಷದ ಸಮಸ್ಯೆ ಇವೆ ಎಂದು ಕಂಡು ಬಂದಿರುತ್ತದೆ. ಈ ಶಿಬಿರದಿಂದ ಜನರಿಗೆ ತುಂಬ ಉಪಯೋಗವಾಗಿದೆ ಎಂದು ಗ್ರಾಮಸ್ಥರು ಅಭಿಪ್ರಾಯ ವ್ಯಕ್ತಪಡಿಸಿದರು.




# ಮಹಿಳಾಭಿವೃದ್ಧಿ ಕಾರ್ಯಕ್ರಮ

## "ಉಚಿತ ಆರೋಗ್ಯ ತಪಾಸಣೆ ಶಿಬಿರ"




ಆಗಸ್ಟ್ 28.2023 ರಂದು ಚಿಟಗುಪ್ಪಾ ತಾಲೂಕಿನ ಮನ್ನಾಏಖೇಳ್ಳಿ ಗ್ರಾಮ ಪಂಚಾಯತಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಎಸ್.ಎಚ್.ಜಿ ಸಮುದಾಯ ಆರೋಗ್ಯ ಕೇಂದ್ರ ಮನ್ನಏಖ್ಖೇಳಿ ಇವರ ಸಂಯುಕತಾಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣೆ ಶಬಿರ ಹಮ್ಮಿಕೊಳ್ಳಲಾಯಿತು. ಈ ಶಬಿರದಲ್ಲಿ 80 ಫಲಾನುಭವಿಗಳು ತಪಾಸಣೆ ಮಾಡಿಸಿಕೊಂಡ ಪರಿಣಾಮವಾಗಿ 6 ಜನರಿಗೆ ಕಣ್ಣಿನ ಪೋರೆಯ ಸಮಸ್ಸೆ, 4 ಜನರಿಗೆ ಕಣ್ಣಿನಲ್ಲಿ ಮಾಂಸ ಬೆಳೆದಿರುವುದು ಮತ್ತು 9 ಜನರಿಗೆ ಕಣ್ಣಿನ ದೃಷ್ಟಿದೋಷದ ಸಮಸ್ಯೆ ಇವೆ ಎಂದು ಕಂಡು ಬಂದಿರುತ್ತದೆ. ಈ ಶಿಬಿರದಿಂದ ಜನರಿಗೆ ತುಂಬ ಉಪಯೋಗವಾಗಿದೆ ಎಂದು ಗ್ರಾಮಸ್ಥರು ಅಭಿಪ್ರಾಯ ವ್ಯಕ್ತಪಡಿಸಿದರು.

## “ಸಂಘ ಪರಿಕಲ್ಪನೆ ತರಬೇತಿ”



ಆಗಸ್ಟ್ 18. 2023 ರಂದು ಚಿಟಗುಪ್ಪಾ ತಾಲೂಕಿನ ವಡ್ಡನಕೇರಾ ಗ್ರಾಮದಲ್ಲಿ ಶ್ರೀಮತಿ ಅಮಿತಾರವರು 15 ಮಹಿಳೆಯರನ್ನು ಒಟ್ಟುಗೂಡಿಸಿ ಹೊಸ ಸಂಘದ ಪರಿಕಲ್ಪನೆ ನೀಡುವುದರ ಜೊತೆಗೆ ಆರ್ಬಿಟ್ ಸಂಸ್ಥೆಯ ಪರಿಚಯ ಮಾಡಿಕೊಡಲಾಯಿತು ಹಾಗೂ ಸಂಘದ ನೀತಿ ನಿಯಮಗಳ ಕುರಿತು ಮಾಹಿತಿ ತಿಳಿಸಲಾಯಿತು

## “ಕೈ ತೋಟ ನಿರ್ಮಣ”



ಆಗಸ್ಟ್ 2023 ರಲ್ಲಿ ಶ್ರೀಮತಿ ರೀಟಾ ರವರು ಉಡಬಾಳದಲ್ಲಿ 4 ಸಂಘದ ಮಹಿಳೆರಿಗೆ ಪೌಂಷ್ಟಿಕ ಆಹಾರ ಕುರಿತು ತರಬೇತಿಯನ್ನು ನೀಡಿ, ಹಲವಾರು ರೀತಿಯ ಆಹಾರ ಬೆಳವಣಿಗೆ ಕುರಿತು ಹಾಗು ಸೇವನೆ ಕುರಿತು ತಿಳಿಸುತ್ತಾ, ಹೋಲದಲ್ಲಿ ಬೆಳೆಯುವ ಬೆಳೆಗಳಿಗೆ ರಾಸಾಯನಿಕ ಗೊಬ್ಬರ ಉಪಯೋಗಿಸಿ, ಆಹಾರವು ವಿಷಪೊರಿತವಾಗಿರುತ್ತದೆ. ಆರೋಗ್ಯದ ಮೇಲೆ ಅದರಿಂದಾಗುವಾ ಪರಿಣಮಗಳ ಬಗ್ಗೆ ತಿಳಿಸಿ, ಕೈ ತೋಟ ನಿರ್ಮಣದ ಮಾಹತ್ವದ ಕುರಿತು ಅರಿವು ಮುಡಿಸಿ ಹಾಗೂ ತಿಪ್ಪೆಗೊಬ್ಬರ ಬಳಕೆಯಿಂದಾಗುವ ಊಪಯೋಗಳನ್ನು ತಿಳಿಸಲಾಯಿತು. ಇದರ ಪರಿಣಾಮವಾಗಿ ಶ್ರೀಮತಿ ಪಾರ್ವತಿ ಕಲ್ಲಪ ರವರು ಮನೆಯಲ್ಲಿ ಕೈ ತೋಡ ಮಾಡಿಕೊಂಡಿದ್ದಾರೆ.

## “ಪಂಚಾಯತ್ ರಾಜ್” ಕುರಿತು ತರಬೇತಿ”



ಹುಮ್ನಬಾದ ತಾಲೂಕಿನ ಕಪ್ಪರಗಾಂವ ಗ್ರಾಮದಲ್ಲಿ ದಿ॥ 21-08-2023 ರಂದು ಆರ್ಬಿಟ್ ಸಂಸ್ಥೆಯ ಮಹಿಳಾ ಸಬಲೀಕರಣ ಯೊಜನೆಯ ಕಾರ್ಯಕರ್ತರಾದ ಶ್ರೀಮತಿ ಸಬಿತಾರವರು ಕಾವೇರಿ ವಿಶೇಷ ಚೆತನ ಸ್ವ ಸಹಾಯ ಸಂಘದ ಸದಸ್ಯರಿಗೆ “ಪಂಚಾಯತ್‌ರಾಜ್” ಕುರಿತು ತರಬೇತಿಯನ್ನು ನಿಡಿದರು. 10 ಜನರು ಭಾಗವಹಿಸಿ ಇದರ ಉಪಯೋಗ ಪಡೆದರು. ಇವರು ವಿಶೇಷ ಚೇತನ ವ್ಯಕ್ತಿಗಳಾಗಿರುವುದ್ದರಿಂದ ಪಂಚಾಯತ್‌ರಾಜ್ ಮತ್ತು ಅದರ ಯೋಜನೆಗಳ ಕುರಿತು ಮಾಹಿತಿ ನೀಡಿ, ಗ್ರಾಮ ಪಂಚಾಯಿತಿಯಲ್ಲಿ ನಡೆಯುವ ಸಭೆಗಳಲ್ಲಿ ಭಾಗವಹಿಸಲು ಪ್ರೋಸ್ತಹ ನೀಡಲಾಯಿತ್ತು. ಯಾವುದೆ ರೀತಿ ಹಿಂಜರಿಕೆಇಲ್ಲದೆ ನಾಯಕರಾಗಿ ಮುಂದೆಬಂದು ಸಭೆಗಳಲ್ಲಿ ಭಾಗವಹಿಸಲು ಪ್ರಯತ್ನಿಸಬೇಕು ಮತ್ತು ಸಮಸ್ಯಗಳಿಗೆ ಪರಿಹಾರ ಕಂಡುಕೋಳಬೇಕು ಎಂಬ ಅರಿವು ಮುಡಿಸಲಾಯಿತು. ಈ ಸಭೆಯಲ್ಲಿ ಸಮಸ್ಯಗಳ ಕುರಿತು ಚರ್ಚಿಸಿ, ಕೇಲವೂಬ್ಬರು ನಾವು ನಾಯಕತ್ವ ವಹಿಸಿಕೂಳ್ಳುತ್ತೇವೆ ಎಂದು ಮುಂದೆಬಂದರು.

## “ಸರ್ಕಾರದ ಸೌಲಭ್ಯಗಳ ಕುರಿತು ತರಬೇತಿ”



ದಿನಾಂಕ 22.08.2023 ರಂದು ಭಾಲ್ಕಿ ತಾಲೂಕಿನ ಬೀರದೇವ್ ಕಾಲೋನಿಯಲ್ಲಿ ಐದು ಸಂಘದ ಸದಸ್ಯರನ್ನು ಒಟ್ಟು ಸೇರಿಸಿ ಜ್ಞಾನಜ್ಯೋತಿ ಮಹಾಸಂಘದ ಸಭೆಯನ್ನು ನಡೆಸಲಾಯಿತು. ಸಂಪನ್ಮೂಲ ವ್ಯಕ್ತಿಗಳಾಗಿ ಸಿಸ್ಟರ್ ಜೀವಲತಾ ಇವರು ಸರಕಾರದಿಂದ ಸಿಗುವ ಸೌಲಭ್ಯಗಳ ಕುರಿತು ಸರಕಾರ ಐದು ಗ್ಯಾರಂಟಿಗಳ ಕುರಿತು ಹಾಗೂ ಆರ್ಬಿಟ್ ಸಂಸ್ಥೆಯಲ್ಲಿ ಸಂಘ ನೊಂದಾವಣಿ ಮಾಡುವುದರ ಕುರಿತು ತಿಳಿಸಿದರು. ಸಂಘದ ಸದಸ್ಯರು ನೊಂದಾವಣಿ ಮಾಡುವುದರ ಕುರಿತು ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿದರು.

## “ಆರೋಗ್ಯ ನೈರ್ಮಲ್ಯದ ಬಗ್ಗೆ ತರಬೇತಿ”



ಆಗಸ್ಟ್ 4 ರಂದು ಗೌರ್ ಗ್ರಾಮದಲ್ಲಿ ಆರೋಗ್ಯ ನೈರ್ಮಲ್ಯದ ಬಗ್ಗೆ ತರಬೇತಿ ನೀಡಲಾಯಿತು. ಈ ತರಬೇತಿಯಲ್ಲಿ 20 ಜನರು ಭಾಗವಹಿಸಿದರು. ಸಂಪನ್ಮೂಲ ವ್ಯಕ್ತಿಯಾಗಿ ಸಿಸ್ಟರ್ ಎಡ್ನಾಅವರು ಆರೋಗ್ಯ ನೈರ್ಮಲ್ಯದ ಕುರಿತು ಮಹಿಳೆಯರಿಗೆ, ಮನೆ ಹಾಗೂ ಮನೆಯ ಸುತ್ತಮುತ್ತಲು ಶುಚಿತ್ವ ಕಾಪಾಡಿದರೆ ನಮಗೆ ಒಳ್ಳೆಯ ಆರೋಗ್ಯ ಸಿಗುತ್ತದೆ ಹಾಗೂ ನಮ್ಮ ಮನೆಯಲ್ಲಿಯೇ ತರಕಾರಿಗಳನ್ನು ಬೆಳೆಸಿ ತಿನ್ನುವುದರಿಂದ ನಮ್ಮ ಆರೋಗ್ಯವು ಒಳ್ಳೆಯದಾಗಿರುತ್ತದೆ. ಸರಿಯಾದ ಆರೋಗ್ಯವನ್ನು ಕಾಪಾಡಿಕೊಳ್ಳುವದು ಇಂದಿನ ಪ್ರಮುಖ ಕಾಳಜಿಯಾಗಿದೆ. ನಮ್ಮ ದ್ಯನಂದಿನ ಜೀವನದಲ್ಲಿ ಆರೋಗ್ಯಕ್ಕೆ ಬಹಾಳ ಮುಖ್ಯವಾದ ಸ್ಥಾನವಿದೆ. ಆರೋಗ್ಯವೆ ನಮ್ಮ ದೊಡ್ಡ ಆಸ್ತಿಯಾಗಿದೆ ಎಂದು ತಿಳಿಸಿದರು.

## “ಜನಜಾಗೃತಿ ತಾಲೂಕ ಮಹಿಳಾ ಒಕ್ಕೂಟ ಸಭೆ”



ದಿನಾಂಕ 23.08.2023 ರಂದು ಭಾಲ್ಕಿ ತಾಲೂಕಿನ ಏಸು ನಿಲಯ ಆವರಣದಲ್ಲಿ ಜನಜಾಗೃತಿ ತಾಲೂಕ ಒಕ್ಕೂಟ ಸಭೆಯನ್ನು ಏರ್ಪಡಿಸಲಾಯಿತು. ಈ ಸಭೆಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ವಿಜಯಕುಮಾರ ಅವರು ಆಗಮಿಸಿದರು. 6 ಮಹಾ ಸಂಘದಿಂದ 16 ಜನ ಭಾಗವಹಿಸಿದರು. ಫಾದರ್ ಅವರು ಸಮಯ ಪರಿಕಲ್ಪನೆ ಮತ್ತು ಸಂಘ ಮಹಾಸಂಘ ಒಕ್ಕೂಟ ಮಹಿಳೆಯರ ಜವಬ್ದಾರಿಗಳ ಕುರಿತು ತಿಳಿಸಿದರು. ನಾಯಕತ್ವಗಳ ವಿವಿದ ಮಟ್ಟದಲ್ಲಿ ಮಹಿಳೆಯರ ಪಾತ್ರ ಮುಖ್ಯ ಎಂದು ತಿಳಿಸಿದರು. ಮಹಿಳಾ ಸಬಲೀಕರಣ ಯೋಜನೆಯ ಶ್ರೀಮತಿ ನಿರ್ಮಲಾ ಅವರು ಮಹಾಸಂಘ , ತಾಲೂಕ ಒಕ್ಕೂಟ, ಮತ್ತು ಜಿಲ್ಲಾ ಒಕ್ಕೂಟಗಳ ಕುರಿತು ತಿಳಿಯಪಡಿಸಿದರು. ಸ್ಥಳಿಯ ಸಂಯೋಜಕರಾದ ಸಿಸ್ಟರ್ ಜೀವಲತಾ ಮತ್ತು ಕಾರ್ಯಕರ್ತೆಯರಾದ ಶ್ರೀಮತಿ ಗೀತಾ, ಶ್ರೀಮತಿ ಸುಜಾತ ಅವರು ಕಾರ್ಯಕ್ರಮದ ಜವಾಬ್ದಾರಿಗಳನ್ನು ವಹಿಸಿಕೊಂಡರು. 3 ಗಂಟೆಗೆ ಕಾರ್ಯಕ್ರಮ ಮುಕ್ತಾಯವಾಯಿತು.



# ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಕಾರ್ಯ

**ಹುಮನಾಬಾದ್: ಆರ್ಬಿಟ್ ಸೇವಾ ಸಂಸ್ಥೆ, ಅಜೀಂಮ್ ಪ್ರೇಮಜಿ ಫೌಂಡೇಶನ್**

## ಶಿಕ್ಷಕರಿಗೆ ಒಂದು ದಿನದ ಆಪ್ತಸಮಾಲೋಚನೆಯ ತರಬೇತಿ



ಉದಯಕಾಲ ನ್ಯೂಸ್

**ಹುಮನಾಬಾದ್:** ಪಟ್ಟಣದ ಹೊರವಲಯದಲ್ಲಿರುವ ಆರ್ಬಿಟ್ ಸೇವಾ ಸಂಸ್ಥೆ ಹಾಗೂ ಅಜೀಂಮ್ ಪ್ರೇಮಜಿ ಫೌಂಡೇಶನ್ ಅವರ ಸಂಯುಕ್ತಾಶ್ರಯದಲ್ಲಿ ಇಲ್ಲಿನ ಆರ್ಬಿಟ್ ಸಂಸ್ಥೆಯಲ್ಲಿ ಮಾನಸಿಕ ಅಸ್ವಸ್ಥರನ್ನು ಸಮುದಾಯ ಆಧಾರಿತವಾಗಿ ಪೂನರ್ವಸತಿ ಗೋಳಿಸುದಲ್ಲಿ ಶಿಕ್ಷಕರಿಗೆ ಒಂದು ದಿನದ ಆಪ್ತಸಮಾಲೋಚನಾ ತರಬೇತಿ ಜರುಗಿತು.

ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ವ್ಯವಸ್ಥಾಪಕ ಫಾದರ್ ಅನೀಲ್ ಕ್ರಾಸ್ತಾ ರವರು ಪ್ರಸ್ತವಿಕವಾಗಿ ಮಾತಾಡಿ, ಗುರುವಿನ ಸ್ಥಾನ ದೇವರಿಗಿಂತ ದೊಡ್ಡದು. ಒಂದು ಜೀವ ಉಳಿಸಿ ಬೇಳೆಸುವ ಶಕ್ತಿ ಶಿಕ್ಷಕರಿಗಿದೆ. ಶಾಲೆಯಲ್ಲಿ ಶಿಕ್ಷಣಕ್ಕೆ ಪೂರಕವಾದ ವಾತಾವರಣ ನಿರ್ಮಾಣ ಮಾಡುವದು ಮೋದಲ ಆದ್ಯತೆಯಾಗಬೇಕು. ಎಂದರು.

ಮಗು ಒತ್ತಡಕ್ಕೆ ಒಳಗಾಗುವದರಲ್ಲಿ ಕೌಟುಂಬಿಕ ಕಾರಣ ಪ್ರಮುಖ ಪಾತ್ರ ವಹಿಸುತ್ತದೆ. ಇಂತಹ ಮಕ್ಕಳನ್ನು ತಾವು ಗುರುತಿಸಿ ಆರಂಭದಲ್ಲೆ ಆಪ್ತ ಸಮಾಲೋಚನೆ ಮಾಡುವ ಮುಲಕ ಪರಿಹಾರ ಕಂಡುಕೊಳ್ಳಬಹುದು ಎಂದು ನೂಡಿದರು. ಈ ತರಬೇತಿ ಕಾರ್ಯಕ್ರಮಕ್ಕೆ ಎ.ಪಿ.ಡಿ ಸಂಸ್ಥೆಯ ಕುಮಾರಿ ಅಲ್ಪಾ ಸೇರಿದಂತೆ ಈ ತರಬೇತಿಯಲ್ಲಿ ಒಟ್ಟು 35 ಶಿಕ್ಷಕರು ಹಾಗೂ ಸಂಸ್ಥೆಯ ಸಿಬ್ಬಂರಿವರ್ಗದವರು, ಇದ್ದರು. ರವಿ ಕೋಡ್ಡಿಕರ್ ನಿರೂಪಿಸಿದರು. ರೀಟಾ ಉಡಬಾಳ್, ನೀಲಕಂಠ ರಂಜೇರಿ ಸ್ವಾಗತಿಸಿದರು. ಅರುಣಕುಮಾರ ರಂಜೇರಿ. ವಂದಿಸಿದರು.

## ಮಾನಸಿಕ ಕಾಯಿಲೆ ಎನ್ನುವುದು ಶಾಪವಲ್ಲ: ಸಿಸ್ಟರ್ ವಿಲ್ಮಾ ಮ್ಯಾಥ್ಯು



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ:ಮಾನಸಿಕ ರೋಗಗಳ ಬಗ್ಗೆ ಪರಿಪೂರ್ಣ ಜಾಗೃತಿ ಮೂಡಿಲ್ಲ.ಇಂದಿಗೂ ಈ ರೋಗದ ಬಗ್ಗೆ ಪುರಾಣ, ಕಥೆ, ದೇವರು, ಹರಕೆಗಳನ್ನು ಕಟ್ಟಿಕೊಳ್ಳಲಾಗುತ್ತಿದೆ.ಹಳ್ಳಿಗಳಲ್ಲಿ ಇಂದಿಗೂಮಾನಸಿಕಅಸ್ವಸ್ಥರನ್ನು ಚೈನ್‌ನಿಂದ ಕಟ್ಟಿಹಾಕುವ, ಕತ್ತಲಲ್ಲಿ ಕೂಡಿಡುವ ಕೆಲಸ ನಡೆಯುತ್ತಿದೆ.ಮಾನಸಿಕಕಾಯಿಲೆ ಎನ್ನುವುದುಶಾಪವಲ್ಲ.ಅವರನ್ನು ವ್ಯವಸ್ಥೆಯಿಂದ ಹೊರಗಿಡುವ ಕೆಲಸವಾಗದೇ ಅವರನ್ನು ಮುಖ್ಯವಾಹಿನಿಗೆ ತಂದು ಗುಣಪಡಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ.

ಆಶಾ ಕಾರ್ಯಕರ್ತೆಯರು, ಈ ವಿಷಯದಲ್ಲಿಹೆಚ್ಚಿನ ಕಾಳಜಿ ವಹಿಸಬೇಕು ಎಂದು ಆರ್ಬಿಟ್ ಸಂಸ್ಥೆಯ ಕಾರ್ಯಕ್ರಮಗಳ ವ್ಯವಸ್ಥಾಪಕರಾದ ಸಿಸ್ಟರ್ ವಿಲ್ಮಾ ಮ್ಯಾಥ್ಯು ರವರು ಪಟ್ಟಣದ ಹೊರ ವಲಯದಲ್ಲಿರುವ ಆರ್ಬಿಟ್ ಸಂಸ್ಥೆ ಹಾಗೂ ಅಜೀಂಮ್ ಪ್ರೇಮಜಿಫೌಂಡೆಶನ್ ಸಂಯುಕ್ತಾಶ್ರಯದಲ್ಲಿಮಾನಸಿಕ ಅಸ್ವಸ್ಥರನ್ನು ಸಮುದಾಯ ಆಧಾರಿತವಾಗಿ ಪೂನರ್ವಸತಿ ಗೋಳಿಸುದಲ್ಲಿಆಶಾಕಾರ್ಯಕತೆ-ರ್ಯರಿಗೆ ಒಂದು ದಿನದ ಆಪ್ತ-ಸವಾಲೋಚನಾ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ನುಡಿದರು.

ಉತ್ತಮ ಚಿಕಿತ್ಸೆ ನೀಡುವ ಮೂಲಕ ಸ್ಕಿಜೋಪ್ರೇನಿಯಾ ರೋಗವನ್ನು ಪ್ರಾಥಮಿಕ ಹಂತದಲ್ಲೆ ತಡಗಟ್ಟಲು ಸಾಧ್ಯ. ಜಿಲ್ಲೆಯ ಸರಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ಲಭ್ಯವಿದೆ. ರೋಗದ ಲಕ್ಷಣಗಳನ್ನುಕಂಡು ಬಂದರೆ ತಕ್ಷಣಚಿಕಿತ್ಸೆತೆಗೆದುಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಎ.ಪಿ.ಡಿ ಸಂಸ್ಥೆಯ ಕುಮಾರಿ ಅಲ್ಪಾ ಕ್ಲಿನಿಕಲ್ ಮನಶ್ಯಾಸ್ತ್ರಜ್ಞ ಮಾತನಾಡಿ.ಈ ತರಬೇತಿಯಲ್ಲಿ ಆಶಾ ಕಾರ್ಯಕರ್ತೆಯರು ಆಪ್ತ-ಸಮಾಲೋಚನೆಯಾ ಕೌಶಲ್ಯಗಳನ್ನುತಿಳಿದುಕೊಂಡು ಸ್ಥಳೀಯ ಮಟ್ಟದಲ್ಲಿ ಆಪ್ತ-ಸಮಾಲೋಚನೆ ಮಾಡುವುದರ ಮುಲಕ ಮಾನಸಿಕರೋಗವನ್ನು ಗುರುತಿಸಿ ಅವರಿಗೆ ಸಹಾಯ ಮಾಡಬೇಕು ಎಂದು ತಿಳಿ ಹೇಳಿದರು.

ಈ ತರಬೇತಿಯಲ್ಲಿ ಒಟ್ಟು 35 ಜನ ಆಶಾ ಕಾರ್ಯಕತೆ-ರ್ಯರು ಹಾಗೂ ಸಂಸ್ಥೆಯ ಸಿಬ್ಬಂದಿವರ್ಗದವರುಉಪಸ್ಥಿತರಿದ್ದರು. ಕಾರ್ಯಕ್ರಮದ ಆರಂಭದಲ್ಲಿ ಶ್ರೀಮತಿ ಮಹಾದೇವಿ ಹಾಗೂ ತಂಡದವರುಪ್ರರ್ಥನೆಮಾಡಿದರು. ರವಿ ಕೋಡ್ಡಿಕರ್ ಸ್ವಾಗತಿಸಿದರು. ಅರುಣಕುಮಾರ ಕಣಜಿ ನಿರೂಪಣೆ ಮಾಡಿದರು. ಕೊನೆಯಲ್ಲಿ ಶ್ರೀಮತಿ ಪ್ರೀತಿ ಧನ್ಯವಾದಗಳನ್ನು ಸಲ್ಲಿಸಿದರು.

## ಆಶಾ ಕಾರ್ಯಕರ್ತೆಯರಿಗೆ ಒಂದು ದಿನದ ಆಪ್ತ ಸಮಾಲೋಚನಾ ತರಬೇತಿ



ಸಂಜೆವಾಣಿ ವಾರ್ತೆ

ಹುಮನಾಬಾದ್:ಆ.29: ಪಟ್ಟಣದ ಹೊರ ವಲಯದಲ್ಲಿರುವ ಆರ್ಬಿಟ್ ಸೇವಾ ಸಂಸ್ಥೆ ಹಾಗೂ ಅಜೀಂಮ್ ಪ್ರೇಮಜಿಫೌಂಡೆಶನ್ ಸಂಯುಕ್ತಾಶ್ರಯದಲ್ಲಿಆರ್ಬಿಟ್ ಸಂಸ್ಥೆಯಲ್ಲಿ ಮಾನಸಿಕ ಅಸ್ವಸ್ಥರನ್ನು ಸಮುದಾಯ ಆಧಾರಿತವಾಗಿ ಪೂನರ್ವಸತಿ ಗೋಳಿಸುದಲ್ಲಿ ಆಶಾ ಕಾರ್ಯಕರ್ತೆಯರಿಗೆಒಂದು ದಿನದಆಪ್ತ-ಸಮಾಲೋಚನಾ ತರಬೇತಿ ಶಿಬಿರ ಜರುಗಿತು.

ಆರ್ಬಿಟ್ ಸಂಸ್ಥೆಯ ಕಾರ್ಯಕ್ರಮಗಳವ್ಯವಸ್ಥಾಪಕಿ ಸಿಸ್ಟರ್ ವಿಲ್ಮಾ ಮ್ಯಾಥ್ಯು ಅವರು ಪ್ರಸ್ತವಿಕವಾಗಿ ಮಾತಾಡಿ, ಮಾನಸಿಕ ಅಸ್ವಸ್ಥರುಸಮುದಾಯದಿಂದ ತಳ್ಳಲ್ಪಟ್ಟವರಾಗಿದ್ದಾರೆಅವರನ್ನು ಸಮುದಾಯದಲ್ಲಿ ಪುನರ್ ಚೇತನಗೊಳಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಎಂದು ಹೇಳಿದರು.

ಸಂಪನ್ಮೂಲ ವ್ಯಕ್ತಿಯಾಗಿ ಎ.ಪಿ.ಡಿ ಸಂಸ್ಥೆಯ ಕುಮಾರಿ ಅಲ್ಪಾ ಕ್ಲಿನಿಕಲ್ ಮನಶ್ಯಾಸ್ತ್ರಜ್ಞ ಇವರು ಈ ತರಬೇತಿಯಲ್ಲಿ ಆಶಾ ಕಾರ್ಯಕರ್ತೆಯರು ಆಪ್ತಸಮಾಲೋಚನೆಯಾ ಕೌಶಲ್ಯಗಳನ್ನುತಿಳಿದುಕೊಂಡು ಸ್ಥಳೀಯ ಮಟ್ಟದಲ್ಲಿ ಆಪ್ತ ಸಮಾಲೋಚನೆಮಾಡುವುದರ ಮುಲಕ ಮಾನಸಿಕರೋಗವನ್ನು ಗುರುತಿಸಿ ಅವರಿಗೆ ಸಹಾಯ ಮಾಡಬೇಕು ಎಂದು ತಿಳಿಸಿ ಹೇಳಿದರು.

ಈ ತರಬೇತಿಯಲ್ಲಿ ಮುಖ್ಯವಾಗಿ ಮಾನಸಿಕ ಅಸ್ವಸ್ಥರ ಲಕ್ಷಣವಾದ ಮಂದ, ಮದ್ಯಮ ಹಾಗೂ ತೀವ್ರ ರೋಗಿಗಳ ಬಗ್ಗೆ ವಿವಿದ ರೀತಿಯ ಚಟುವತಿಕೆಯ ಮುಲಕ ಶಿಬಿರಾರ್ಥಿಗಳಿಗೆ ಸುಲಭವಾಗಿಅರ್ಥವಾಗುವ ರೀತಿಯಲ್ಲಿತರಬೇತಿನೀಡಿದರು. ಈ ತರಬೇತಿಯಲ್ಲಿ ಒಟ್ಟು 35 ಆಶಾ ಕಾರ್ಯಕತೆ-ರ್ಯರು ಹಾಗೂ ಸಂಸ್ಥೆಯ ಸಿಬ್ಬಂರಿವರ್ಗದವರು.ಇದ್ದರು. ಮಹಾದೇವಿ ಹಾಗೂ ತಂಡದವರು.ಪ್ರಾರ್ಥಿಸಿದರು. ರವಿಕೋಡ್ಡಿಕರ್.ಸ್ವಾಗತಿಸಿದರು. ಅರುಣಕುಮಾರ, ಪ್ರೀತಿ ವಂದಿಸಿದರು.

## ಶಿಕ್ಷಕರಿಗೆ ಒಂದು ದಿನದ ಆಪ್ತ-ಸಮಾಲೋಚನೆಯ ತರಬೇತಿ



ಹುಮನಾಬಾದ : ಪಟ್ಟಣದ ಹೊರ ವಲಯ ದಲ್ಲಿರುವ ಆರ್ಬಿಟ್ ಸಂಸ್ಥೆ ಹಾಗೂ ಅಜೀಂಮ್ ಪ್ರೇಮಜಿ ಫೌಂಡೆಶನ್ ಸಂಯುಕ್ತಾಶ್ರಯದಲ್ಲಿ ಮಾನಸಿಕ ಅಸ್ವಸ್ಥರನ್ನು ಸಮುದಾಯ ಆಧಾರಿತವಾಗಿ ಪೂನರ್ವಸತಿ ಗೋಳಿಸುದಲ್ಲಿ ಶಿಕ್ಷಕರಿಗೆ ಒಂದು ದಿನದ ಆಪ್ತ-ಸಮಾಲೋಚನಾ ತರಬೇತಿ ಹಮಿಕೋಳ್ಳಲಾಯಿತು.

ಅರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ವ್ಯವಸ್ಥಾಪಕರಾದ ಫಾದರ್ ಅನೀಲ್ ಕ್ರಾಸ್ತಾ ರವರು ಪ್ರಸ್ತವಿಕವಾಗಿ ಮಾತಾಡುತ, ಗುರುವಿನ ಸ್ಥಾನ ದೇವರಿಗಿಂತ ದೊಡ್ಡದು.

ಒಂದು ಜೀವ ಉಳಿಸಿ ಬೇಳೆಸುವ ಶಕ್ತಿ ಶಿಕ್ಷಕರಿಗಿದೆ. ಶಾಲೆಯಲ್ಲಿ ಶಿಕ್ಷಣಕ್ಕೆ ಪೂರಕವಾದ ವಾತಾವರಣ ನಿರ್ಮಾಣ ಮಾಡುವದು ಮೋದಲ ಆದ್ಯತೆಯಾಗಬೇಕು.ಮಗು ಒತ್ತಡಕ್ಕೆ ಒಳಗಾಗುವದರಲ್ಲಿ ಕೌಟಂಬಿಕ ಕಾರಣ ಪ್ರಮುಖ ಪಾತ್ರ ವಹಿಸುತ್ತದೆ.

ಇಂತಹ ಮಕ್ಕಳನ್ನು ತಾವುಗುರುತಿಸಿ ಆರಂಭದಲ್ಲೆ ಆಪ್ತ-ಸಮಾಲೋಚನೆ ಮಾಡುವ ಮುಲಕ ಪರಿಹಾರ ಕಂಡುಕೊಳ್ಳಬಹುದು ಎಂದು ನೂಡಿದರು.

ಈ ತರಬೇತಿ ಕಾರ್ಯಕ್ರಮಕ್ಕೆ ಎ.ಪಿ.ಡಿ ಸಂಸ್ಥೆಯ ಕುಮಾರಿ ಅಲ್ಪಾ ರವರು ಆಗಮಿಸಿದ್ದರು. ಈ ತರಬೇತಿಯಲ್ಲಿ ಒಟ್ಟು 35 ಶಿಕ್ಷಕರು ಹಾಗೂ ಸಂಸ್ಥೆಯ ಸಿಬ್ಬಂರಿವರ್ಗದವರು ಉಪಸ್ಥಿತರಿದ್ದರು.

**ಹುಮನಾಬಾದ್: ಆರ್ಬಿಟ್ ಸಂಸ್ಥೆ ಹಾಗೂ ಅಜೀಂಮ್ ಪ್ರೇಮಜಿ ಫೌಂಡೆಶನ್**

## ಆಶಾ ಕಾರ್ಯಕರ್ತೆ: ಒಂದು ದಿನದ ಆಪ್ತ ಸಮಾಲೋಚನೆಯ ತರಬೇತಿ



ಉದಯಕಾಲ ನ್ಯೂಸ್

**ಹುಮನಾಬಾದ್:** ಪಟ್ಟಣದ ಹೊರ ವಲಯ ದಲ್ಲಿರುವ ಆರ್ಬಿಟ್ ಸೇವಾ ಸಂಸ್ಥೆ ಹಾಗೂ ಅಜೀಂಮ್ ಪ್ರೇಮಜಿ ಫೌಂಡೇಶನ್ ಸಂಯುಕ್ತಾ ಶ್ರಯದಲ್ಲಿ ಆರ್ಬಿಟ್ ಸಂಸ್ಥೆಯಲ್ಲಿ ಮಾನಸಿಕ ಅಸ್ವಸ್ಥರನ್ನು ಸಮುದಾಯ ಆಧಾರಿತವಾಗಿ ಪೂನರ್ವಸತಿ ಗೊಳಿಸದಲ್ಲಿ ಆಶಾ ಕಾರ್ಯಕರ್ತೆ ಯರಿಗೆ ಒಂದು ದಿನದ ಆಪ್ತ-ಸಮಾಲೋಚನಾ ತರಬೇತಿ ಶಿಬಿರ ಜರುಗಿತು.

ಆರ್ಬಿಟ್ ಸಂಸ್ಥೆಯ ಕಾರ್ಯಕ್ರಮಗಳ ವ್ಯವಸ್ಥಾಪಕಿ ಸಿಸ್ಟರ್ ವಿಲ್ಮಾ ಮ್ಯಾಥ್ಯು ಅವರು ಪ್ರಸ್ತವಿಕವಾಗಿ ಮಾತಾಡಿ, ಮಾನಸಿಕ ಅಸ್ವಸ್ಥರು ಸಮುದಾಯದಿಂದ ತಳ್ಳಲ್ಪಟ್ಟವರಾಗಿದ್ದಾರೆ ಅವರನ್ನು ಸಮುದಾಯದಲ್ಲಿ ಪುನರ್ ಚೇತನಗೊಳಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಎಂದು ಹೇಳಿದರು.

ಸಂಪನ್ಮೂಲ ವ್ಯಕ್ತಿಯಾಗಿ ಎ.ಪಿ.ಡಿ ಸಂಸ್ಥೆಯ ಕುಮಾರಿ ಅಲ್ಪಾ ಕ್ಲಿನಿಕಲ್ ಮನಶ್ಯಾಸ್ತ್ರಜ್ಞ ಇವರು ಈ ತರಬೇತಿಯಲ್ಲಿ ಆಶಾ ಕಾರ್ಯಕರ್ತೆಯರು ಆಪ್ತಸಮಾಲೋಚನೆಯಾ ಕೌಶಲ್ಯಗಳನ್ನು ತಿಳಿದು ಕೊಂಡು ಸ್ಥಳೀಯ ಮಟ್ಟದಲ್ಲಿ ಆಪ್ತ ಸಮಾಲೋಚನೆ ಮಾಡುವುದರ ಮುಲಕ ಮಾನಸಿಕ ರೋಗವನ್ನು ಗುರುತಿಸಿ ಅವರಿಗೆ ಸಹಾಯ ಮಾಡಬೇಕು ಎಂದು ತಿಳಿಸಿ ಹೇಳಿದರು.

ಈ ತರಬೇತಿಯಲ್ಲಿ ಮುಖ್ಯವಾಗಿ ಮಾನಸಿಕ ಅಸ್ವಸ್ಥರ ಲಕ್ಷಣವಾದ ಮಂದ, ಮದ್ಯಮ ಹಾಗೂ ತೀವ್ರ ರೋಗಿಗಳ ಬಗ್ಗೆ ವಿವಿದ ರೀತಿಯ ಚಟುವತಿಕೆಯ ಮುಲಕ ಶಿಬಿರಾರ್ಥಿಗಳಿಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ತರಬೇತಿ ನೀಡಿದರು.

ಈ ತರಬೇತಿಯಲ್ಲಿ ಒಟ್ಟು 35 ಆಶಾ ಕಾರ್ಯಕರ್ತೆಯರು ಹಾಗೂ ಸಂಸ್ಥೆಯ ಸಿಬ್ಬಂರಿವರ್ಗದವರು, ಇದ್ದರು. ಮಹಾದೇವಿ ಹಾಗೂ ತಂಡದವರು. ಪ್ರಾರ್ಥಿಸಿ ದರು. ರವಿ ಕೋಡ್ಡಿಕರ್. ಸ್ವಾಗತಿಸಿದರು. ಅರುಣಕುಮಾರ, ಪ್ರೀತಿ ವಂದಿಸಿದರು.

# ಸೇವಾ ಸಂಗಮ ಸಂಸ್ಥೆ ಕಲಬುರಗಿ

**ಅಗಸ್ಟ 15 ರಂದು ಸೇವಾ ಸಂಗಮ ಸಂಸ್ಥೆಯ ಸಿಬ್ಬಂದಿಗಳು ವಿವಿದ ನಗರ ಮತ್ತು ಗ್ರಾಮಗಳಲ್ಲಿ 77ನೇ ಸ್ವತಂತ್ರ್ಯ ದಿನಾಚರಣೆಯನ್ನು ಆಚರಿಸಿದರು.**





## "ಸ್ಪರ್ಶ ಕ್ಯಾನ್ಸರ ಕಾರ್ಯಕ್ರಮ"

## "ಕ್ಯಾನ್ಸರ್ ಕುರಿತು ಅರಿವಿನ ಕಾರ್ಯಕ್ರಮ"



ಅಗಸ್ಟ 14 ರಂದು ಕಲಬುರಗಿ ತಾಲ್ಲೂಕಿನ ಉದನೂರ್ ಗ್ರಾಮದಲ್ಲಿ ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆಯ ಕ್ಯಾನ್ಸರ ಕಾರ್ಯಕ್ರಮದ ಸಂಯೋಜಕಿಯಾದ ಶ್ರೀಮತಿ ಸ್ವಾತಿ ಅವರಿಂದ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಕ್ಯಾನ್ಸರ್‌ನ ಲಕ್ಷಣ, ಗುಣಗಳು, ಹಾಗೂ ಕ್ಯಾನ್ಸರ್ ಪ್ರಾರಂಭಿಕ ಹಂತದಲ್ಲಿ ತಪಾಷಣೆ ಮಾಡಿಸಿಕೊಳ್ಳುವುದರಿಂದ ಆಗುವ ಲಾಭಗಳ ಕುರಿತು ಮಾಹಿತಿ ನೀಡಿದರು, ಸಾವಯವ ಗೊಬ್ಬರದಿಂದ ಮನೆಯಲ್ಲೆ ತರಕಾರಿಗಳನ್ನು ಬೆಳೆಸುವುದರಿಂದ ಆರೋಗ್ಯವನ್ನು ಕಾಪಾಡಬಹುದೆಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ 14 ಜನ ರೈತರು ಹಾಗೂ ಊರಿನ ಮುಖಂಡರು ಭಾಗವಹಿಸಿದ್ದರು.

ಅಗಸ್ಟ 14 ರಂದು ಕಲಬುರಗಿ ತಾಲ್ಲೂಕಿನ ಸರಕಾರಿ ಪ್ರೌಡ ಶಾಲೆ ಉಸನೂರ್‌ಲ್ಲಿ ಕ್ಯಾನ್ಸರ ಆದೋಂಲನ ಕಾರ್ಯಕ್ರಮವನ್ನು ಆಯೋಜಿಸಲಾಯಿತ್ತು. ಈ ಕಾರ್ಯಕ್ರಮದಲ್ಲಿ ಶ್ರೀಮತಿ ವಿಜಯಲಕ್ಷೀ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆಯ ಕ್ಯಾನ್ಸರ್ ಕಾರ್ಯಕ್ರಮದ ಸಂಯೋಜಕಿಯಾದ ಶ್ರೀಮತಿ ಸ್ವಾತಿ ಅವರು, ಕ್ಯಾನ್ಸರ ಕುರಿತು ಜಾಗೃತಿ ನಿಡಿದರು. ಕ್ಯಾನ್ಸರ ಹೇಗೆ ಬರುತ್ತದೆ, ಈ ಒಂದು ಕಾಯಿಲೆ ಬರದಂತೆ ನಾವು ಹೇಗೆ ಎಚ್ಚರವಹಿಸಿಕೊಳ್ಳಬೇಕು. ಹಾಗೂ ಕ್ಯಾನ್ಸರ್ ಬಂದರೆ ತಪಾಷಣೆ ಮಾಡಿಸಿಕೋಳ್ಳುವುದರ ಬಗ್ಗೆ ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ 9ನೇ ಮತ್ತು 10ನೇ ತರಗತಿಯ 55 ವಿದ್ಯಾರ್ಥಿಗಳು ಕಾರ್ಯಕ್ರಮದ ಪ್ರಯೋಜನ ಪಡೆದರು.





ಅಗಸ್ಟ 18 ರಂದು ಕಲಬುರಗಿ ಜಿಲ್ಲೆಯ ಸೇವಾ ಸಂಗಮ ಸಂಸ್ಥೆಯಲ್ಲಿ ಮಹಿಳಾ ಸ್ವ ಸಹಾಯ ಸಂಘದ ಮಹಿಳೆಯರಿಗೆ ಕ್ಯಾನ್ಸರ್ ಕಾರ್ಯಕ್ರಮವನ್ನು ಆಯೋಜಿಸಲಾಯಿತ್ತು. ಈ ಕಾರ್ಯಕ್ರಮದಲ್ಲಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮದ ಸಂಯೋಜಕಿಯಾದ ಶ್ರೀಮತಿ ನಿರ್ಮಲಾ ಅವರು ಭಾಗವಹಿಸಿದರು. ಕ್ಯಾನ್ಸರ ಕಾರ್ಯಕ್ರಮದ ಸಂಯೋಜಕಿಯದ ಶ್ರೀಮತಿ ಸ್ವಾತಿ ಅವರು ಕಾರ್ಯಕ್ರಮದಲ್ಲಿ ಕ್ಯಾನ್ಸರ ಬಗ್ಗೆ ಅದರ ಲಕ್ಷಣಗಳು, ಪರಿಣಾಮಗಳು, ಹಾಗೂ ಮನೆಯಲ್ಲೆ ತರಕಾರಿಗಳನ್ನು ಬೆಳೆಸುವುದರಿಂದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ 42 ಜನ ಮಹಿಳೆಯರು ಭಾಗವಹಿಸಿ ಮಾಹಿತಿ ಪಡೆದುಕೊಂಡರು

# "ಉಜ್ಜೀವನ ಕಾರ್ಯಕ್ರಮಗಳು"



ಆಗಸ್ಟ್ 9 ರಂದು ನಂದಿಕೂರ ಗ್ರಾಮದಲ್ಲಿ ಉಜ್ಜೀವನ ಕಾರ್ಯಕ್ರಮದ ಸಂಯೋಜಕರಾದ ಶ್ರೀಯುತ ಚಂದ್ರಕಾಂತ್ ರವರು ಆಹಾರ ಸರಬರಾಜು ಇಲಾಖೆ ಮತ್ತು ಆಹಾರ ಧ್ಯಾನಗಳ ಬಗ್ಗೆ ಮಾಹಿತಿ ನೀಡಿದರು. ಆರು ಜನ ಮಹಿಳೆಯರು ತಮಗೆ ಆಹಾರ ಸರಬರಾಜು ಇಲಾಖೆಯಿಂದ ಹಣ ಬಂದಿಲ್ಲ ಎಂದು ತಿಳಿಸಿದಾಗ ಅವರು ಈ.ಕೆ.ವೈ.ಸಿ ಮಾಡಿಲ್ಲ ಎಂಬುದಾಗಿ ತಿಳಿದುಬಂತು. ಅವರನ್ನು ಬ್ಯಾಂಕಿಗೆ ಕರೆದುಕೊಂಡು ಹೋಗಿ ಈ.ಕೆ.ವೈ.ಸಿ ಮಾಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಶ್ರೀ ಭಾಗ್ಯವಂತಿ ಮಹಿಳಾ ಸ್ವಸಾಯ ಸಂಘದ 12 ಮಹಿಳೆಯರು ಭಾಗವಹಿಸಿದ್ದರು

ಆಗಸ್ಟ್ 22 ರಂದು ಫರ್ತಾಬಾದ್ ಗ್ರಾಮದಲ್ಲಿ ಉಜ್ಜೀವನ ಕಾರ್ಯಕ್ರಮದ, ಕಾರ್ಯಕರ್ತನಾದ ನವೀನ್ ರವರು, ರೈತ ಸಂಪರ್ಕ ಕೇಂದ್ರದಲ್ಲಿ ಅಧಿಕಾರಿಗಳಿಗೆ ಭೇಟಿ ನೀಡಿ, ಪ್ರಧಾನ ಮಂತ್ರಿ ಕಿಸಾನ್ ಸನ್ಮಾನ್ ನಿಧಿ ಯೋಜನೆ ಮಾಹಿತಿ ಪಡೆದುಕೊಂಡು, 86 ಜನ ರೈತರು ಈ.ಕೆ.ವೈ.ಸಿ ಮಾಡಿಸಿಲ್ಲ ಎಂದು ತಿಳಿದಾಗ, ಅವರೆಲ್ಲರಿಗೂ ಫೋನ್ ಮುಖಾಂತರ ಕರೆ ಮಾಡಿ. ಮಾಹಿತಿಯನ್ನು ತಿಳಿಸಿ, ಅದರಲ್ಲಿ 10 ಜನ ರೈತರಿಗೆ ಈ.ಕೆ.ವೈ.ಸಿ ಯನ್ನು ಮಾಡಿಸಲಾಯಿತು.





ಆಗಸ್ಟ್ 25 ರಂದು ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಅಡಿಯಲ್ಲಿ ಸಾರ್ವಜನಿಕರಿಗೆ ಮಾಹಿತಿ ಪೆಟ್ಟಿಗೆ ಪ್ರಾರಂಭ ಮಾಡಲಾಯಿತು. ಸಂಪನ್ಮೂಲ ವ್ಯಕ್ತಿಗಳಾದ ನಂದಿಕೂರ ಗ್ರಾಮ ಪಂಚಾಯತ್ ಕಾರ್ಯದರ್ಶಿಗಳಾದ ಮಹಾನಂದ ಸಿಂಗೆ ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಕುಪೇಂದ್ರು ವರ್ಮ ಗ್ರಾಮ ಪಂಚಾಯತಿ ಸದಸ್ಯರು ಉಜ್ಜೀವನ ಕಾರ್ಯಕ್ರಮದ ಸಂಯೋಜಕರಾದ ಚಂದ್ರಕಾಂತ್ ರವರು ಈ ಒಂದು ಮಾಹಿತಿ ಪಟ್ಟಿಗೆ ಚಾಲನೆ ನೀಡಿದರು.

ಕಲಬುರಗಿ ಜಿಲ್ಲೆಯ ಉದನೂರು ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆಯಿಂದ ಉಜ್ಜೀವನ ಯೋಜನೆ ಅಡಿಯಲ್ಲಿ ಸ್ಥಳೀಯ ಸಂಪನ್ಮೂಲ ಯೋಜನೆಗಳನ್ನು ಗುರುತಿಸುವುದು ಮತ್ತು ಮುಖಂಡರೊಂದಿಗೆ ಚರ್ಚಿಸುವುದು ದಿನಾಂಕ 14.08.2023 ರಂದು ಶ್ರೀಮತಿ ನಂದಿನಿ ಅವರು ಸ್ಥಳೀಯ ಸಂಪನ್ಮೂಲ ಯೋಜನೆಗಳನ್ನು ಗುರುತಿಸಿಕೊಂಡು, ಶೌಚಾಲಯದ ನಿರ್ಮಾಣಕ್ಕಾಗಿ ಊರಿನ ಮುಖಂಡರೊಂದಿಗೆ ಗ್ರಾಮ ಪಂಚಾಯಿತಿಗೆ ತೆರಳಿ ಅರ್ಜಿಯನ್ನು ಕೊಡಬೇಕೆಂದು ತಿಳಿಸಿದರ



## " ಗ್ರಾಮದ ಅಭಿವೃದ್ಧಿಯೇ..!! ದೇಶದ ಪ್ರಗತಿ. "



ಕಲಬುರಗಿ ಜಿಲ್ಲೆಯ ಸೇವಾ ಸಂಗಮ ಸಂಸ್ಥೆಯಿಂದ ಉಜ್ಜೀವನ ಕಾರ್ಯಕ್ರಮದ ಸಿಬ್ಬಂದಿ ವರ್ಗದವರು 10 ಹಳ್ಳಿಗಳಲ್ಲಿ ಭೇಟಿ ಮಾಡಿ 380 ಕುಟುಂಬಗಳಲ್ಲಿ ರೈತರು ಬೆಳೆಯುತ್ತಿರುವ, ಸಿರಿ- ಧಾನ್ಯಗಳ ಬಗ್ಗೆ ಸಮೀಕ್ಷೆ ಮಾಡಿದರು ಹಾಗೂ ಸಿರಿ-ಧಾನ್ಯಗಳನ್ನು ಹೆಚ್ಚಾಗಿ ಬೆಳೆಸುವುದರಿಂದ ಹಾಗೂ ಸೇವಿಸುವುದರಿಂದ ದೇಹಕ್ಕೆ ಉತ್ತಮ ಪೌಷ್ಠಿಕಾಂಶ ದೊರೆಯುತ್ತದೆ ಹಾಗೂ ಜೀವನವು ಆರೋಗ್ಯದಾಯಕವಾಗುತ್ತದೆ. ಪ್ರಸ್ತುತವಾಗಿ ಸಿರಿ–ಧಾನ್ಯಗಳನ್ನು ಬೆಳಿಸುವುದು ಹೆಚ್ಚು ಲಾಭದಾಯಕವಾಗುತ್ತದೆ ಎಂದು ತಿಳಿಸಿದರು.

## "ಸ್ವತಂತ್ರ್ಯ ದಿನಾಚರಣೆಯ ಪ್ರಯುಕ್ತ 75 ಸಸಿ ನಡುವ ಕಾರ್ಯಕ್ರಮ"

ಕಲಬುರಗಿ ತಾಲೂಕಿನ ಫರತಾಬಾದ ಗ್ರಾಮದಲ್ಲಿ ಸ್ವತಂತ್ರ್ಯ ದಿನಾಚರಣೆಯ ಪ್ರಯುಕ್ತ 75 ಸಸಿ ನಡುವ ಮೂಖಾಂತರ **"ಪರಿಸರ ದಿನಾಚರಣೆ"** ಮಾಡಲಾಯಿತ್ತು. ಪರಿಸರ ದಿನಾಚರಣೆ ಕೇವಲ ಒಂದು ದಿನದ ಆಚರಣೆ ಆಗಿರದೆ ಪ್ರತಿ ದಿನ ಪರಿಸರ ರಕ್ಷಣೆಯಲ್ಲಿ ನಮ್ಮಲ್ಲಿ ನಾವೆ ತೊಡಗಿಸಿಕೊಂಡು ಪ್ರತಿಯೊಬ್ಬರು ಮನೆ ಮುಂದೆ ಸಸಿ ನೆಡಬೇಕೆಂದು ಗ್ರಾಮ ಪಂಚಾಯ ಅಭಿವೃದ್ಧಿ ಅಧಿಕಾರಿಯಾದ ಶ್ರೀಮತಿ ಪ್ರೇಮಾ ದೋಡ್ಡಮನಿ ತಿಳಿಸಿದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ ಶರಣಮ್ಮ ಚಂದ್ರಶೇಖರ್ ಸಜ್ಜನ್ ಮತ್ತು ಉಪಾಧ್ಯಕ್ಷರಾದ ಯಲ್ಲಪ್ಪ ಶೆಟ್ಟೆಪ್ಪ ಮೇಳಕುಂದಿ ಗ್ರಾಮದ ಮುಖಂಡರು ಹಾಗೂ ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಚಂದ್ರಕಾಂತರವರು ಮತ್ತು ಕಾರ್ಯಕರ್ತರಾದ ನವೀನ್ ಭಾಗವಹಿಸಿದರು.



## "ಜನರ ಜೀವನ ಮಟ್ಟದ ಸುಧಾರಣೆಯೇ.. ಗ್ರಾಮೀಣ ಮಟ್ಟದ ಬೆಳವಣಿಗೆ."..!!



ಕಲಬುರಗಿ ಜಿಲ್ಲೆಯ ಪಾಣೇಗ್ಂವ್ ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆಯಿಂದ ಉಜ್ಜಿವನ ಕಾರ್ಯಕ್ರಮದ ಕಾರ್ಯಕರ್ತನಾದ ನವೀನ್‌ರವರು, ಕೃಷಿಯೇತರ ಗುಂಪು ಚಟುವಟಿಕೆಗಳ ಕುರಿತು ಜಾಗೃತಿಯನ್ನು ಮೂಡಿಸಿದರು. ಜನರು ಕೇವಲ ಕೃಷಿಯ ಮೇಲೆ ಅವಲಂಬಿತರಾಗದೆ.! ಕೃಷಿಯೇತರ ಚಟುವಟಿಕೆಗಳಾದ ಕುಂಬಾರಿಕೆ, ಹೈನುಗಾರಿಕೆ, ಜೇನುಸಾಕಣಿಕೆ, ಕುಲುಮೆ ಮಾಡುವುದು, ಮಂಚ ತಯಾರಿಸುವುದು, ಸ್ವಯಂ ಉದ್ಯೋಗ, ಮುಂತಾದವುಗಳು ಮಾಡಿ ಕೌಟುಂಬಿಕ ಜೀವನೋಪಾಯಕ್ಕೆ ಅನುಗುಣವಾಗಿ ಸ್ವ–ಉದ್ಯೋಗವನ್ನು ರೂಪಿಸಿಕೋಳ್ಳಬೇಕೆಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ 14 ಜನ ರೈತರು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.

# Organization of Bidar Integral Transformation (ORBIT)



# APPEAL

## *Remove 'DIS' From DISABLE*

(Only for Indian citizens)

**Account Details :**
**Organization of Bidar Integral**
**Account Number: 3410101006386**
**IFSC: CNRB0003410**
**Branch: Humnabad**

**DONATE NOW**

**Donation Exempted U/S 80G of IT Act 1961**

## *Sponsor a Child with Rs. 500 per Month /6000 per Year.*

*Our goal is to "Focus on what children can do, their abilities, rather than their disability."*

## ACTION PLANS :

1. Assessment and screening of 0-6 years children.
2. Home and Rehabilitation Centre-based intervention support.
3. For Children therapeutic and for Parents/ care takers counselling support.
4. Physical Assessment and distribution of Aids and Appliances.
5. Continuous medication, physiotherapy and surgery support.
6. Physical nourishment through nutritious food support.
7. Social Security and advocacy -UDID, Aadhaar Card & School Enrolment,

**Sponsor a child because every child needs someone like You**


**ADDRESS**

ORBIT, N.H 65, Near Railway Station, Hydrabad Road,
Humnabad Tq. Dist. Bidar, Karnataka 585330
Contact Number: 8660968063, 9743112739
Email: orbitbidar93@gmail.com website: www.orbitbidar.org

**Fr. Victor Anil Vas**
Director ORBIT


Note : Please WhatsApp your address to the above given number after sending money.